

'ಜನನಿ ತಾನೆ ಮೊದಲ ಗುರು' ಎಂಬುದು ಮಕ್ಕಳಿಗಷ್ಟೇ ಅನ್ವಯ ಆಗುವುದಿಲ್ಲ. ಅಪ್ಪನ ಪಟ್ಟವನ್ನೊದಗಿಸುವ ಪತಿಗೂ ಆಕೆಯೇ ಗುರು.

■ ಸ್ವಯಂಪ್ರಭಾ

# ಪತ್ನಿ ತಾನೆ ಮೊದಲ ಗುರು

ಇನ್ನೂ ಒಂದೂವರೆ ವರ್ಷ ದಾಟದ ಕಂದಮ್ಮನನ್ನು ಹಿಡಿದುಕೊಂಡು ವಾಣಿ ಬೆಳಗಿನ ಕೆಲಸ ಕಾರ್ಯಗಳನ್ನು ಮಾಡಲು ಹೆಣಗಾಡುತ್ತಾಳೆ. ಅವಳೇನೂ ಉದ್ಯೋಗಕ್ಕೆ ಹೋಗಬೇಕಿಲ್ಲ. ಆದರೆ ಬೆಳಗಾದ ತಕ್ಷಣ ಮಗಳು ತ್ರಿಶಾ ಬಹಳ ಉಮೇದಿಯಿಂದ ಮಾತನಾಡಲು, ಆಟವಾಡಲು ಶುರು ಮಾಡುತ್ತಾಳೆ.

ತ್ರಿಶಾ ಬೆಳಿಗ್ಗೆ ಗಡದ್ದು ನಿದ್ದೆ ಮಾಡುವವಳಲ್ಲ. ಮುಂಜಾನೆಯೇ ಎದ್ದು, ಮನೆಯಲ್ಲಿ ಇರೋಬರೋ ತನ್ನ ಎಲ್ಲ ಆಟದ ಸಾಮಾನುಗಳನ್ನು ತಂದು ಬೆಡ್ ಮೇಲೆ ಗುಡ್ಡೆ ಹಾಕಿಕೊಳ್ಳುತ್ತಾಳೆ. ನಂತರ ಅಮ್ಮನ ಬಳಿ, 'ಅದು ಕೊಡು, ಇದು ತಾ' ಎಂದು ವರಾತ ಮಾಡುತ್ತಾ ಇರುತ್ತಾಳೆ. ಒಂದಿಷ್ಟು ಹೊತ್ತು ಆಟವಾಡಿ, ಒಂಚೂರು ಹಾಲು ಕುಡಿದಾದ ಬಳಿಕ ಮತ್ತೊಂದು ಸುತ್ತಿನ ನಿದ್ದೆ ಮಾಡುವುದು ಅವಳ ಪರಿಪಾಠವಾಗಿಬಿಟ್ಟಿದೆ ಇತ್ತೀಚೆಗೆ.

ಮಗು ಹೀಗೆ ಮಾಡಿದರೆ ಮನೆಯಲ್ಲಿ ಬೆಳಗಿನ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು ಹೇಗೆ? ಬೆಳಗ್ಗೆ ಎದ್ದ ಕೂಡಲೇ ಅಮ್ಮನೇ ಬೇಕೆಂದು ಹೇಳುವ ಅವಳನ್ನು ಸಂಭಾಳಿಸುತ್ತಲೇ ಕೆಲಸ ಮಾಡುವುದು ವಾಣಿಗೆ ಕಷ್ಟವಾಗುತ್ತಿದೆ. ಅಪ್ಪ ಕಿಶನ್ ತಾನೇ ಕಾಫಿ ಬೆರೆಸಿಕೊಂಡು ಕುಡಿದು ವಾಕಿಂಗ್ ಹೋಗುತ್ತಾನೆ. ಬರುವಷ್ಟರಲ್ಲಿ ಉಪಾಹಾರ ಸಿದ್ಧ ಮಾಡಬೇಕಲ್ಲವೆ. ಕಚೇರಿಗೆ ಹೋಗುವುದಕ್ಕೆ ತಡವಾದರೆ ತನ್ನಿಂದಲೇ ತೊಂದರೆಯಾಯಿತು ಎಂದು ವಾಣಿ ಕೊರಗುವುದುಂಟು. ಎಳೆಯ ಮಕ್ಕಳಿರುವ ಹೆಚ್ಚಿನ ಮನೆಗಳಲ್ಲಿ ಇಂತಹುದೇ ಪರಿಸ್ಥಿತಿ ಎದುರಾಗುತ್ತವೆ. ನ್ಯೂಕ್ಲಿಯರ್ ಕುಟುಂಬವಾದರೆ ಪರಿಸ್ಥಿತಿ ಸಂಭಾಳಿಸುವುದು ಸುಲಭವಲ್ಲ.

ಮಕ್ಕಳನ್ನು ಸಂಭಾಳಿಸುವ ಅಮ್ಮಂದಿರು ಎಷ್ಟೋ ಬಾರಿ ಇದು ತಮ್ಮೊಬ್ಬರದೇ ಹೊಣೆಗಾರಿಕೆ ಎಂದುಕೊಂಡಿರುತ್ತಾರೆ. ಅಥವಾ ಇದನ್ನೆಲ್ಲ ನಿರ್ವಹಿಸುವುದು ತಮಗೆ ಮಾತ್ರ ಸಾಧ್ಯ, ತಾನು ಮಾತ್ರ ಮಗುವಿನ ಕೆಲಸಗಳನ್ನು ಸರಿಯಾಗಿ ಮಾಡಬಲ್ಲೆ ಎಂದೂ ಭಾವಿಸಿರುತ್ತಾರೆ. ಅಮ್ಮನಾಗುವ ಸಂದರ್ಭದಲ್ಲಿ ಮಕ್ಕಳನ್ನು ಪಾಲನೆ ಮಾಡುವ ಕೌಶಲವೊಂದು ಮಹಿಳೆಯರಿಗೆ ಜೈವಿಕವಾಗಿಯೇ ಸಿದ್ಧಿಸಿರುತ್ತದೆ ಎಂದಿಟ್ಟುಕೊಳ್ಳೋಣ. ಆದರೆ ಪಾಲನೆಯಲ್ಲಿರುವ ಖುಷಿಯನ್ನು ಹೇಗೆ ಕಂಡುಕೊಳ್ಳಬಹುದು ಎಂಬುದನ್ನು ಅಪ್ಪಂದಿರಿಗೆ ಹೇಳಿಕೊಡುವ ಮೂಲಕ ಅಮ್ಮಂದಿರು, ಅಪ್ಪನ ಮುಖದಲ್ಲಿಯೂ ಸಂತೃಪ್ತಿಯ ನಗುವೊಂದು ಮೂಡುವ ಹಾಗೆ ಮಾಡಬಹುದು. ಅದಕ್ಕಾಗಿ ಕೊಂಚ ಪ್ರಯತ್ನಪಟ್ಟರೆ, ತಾವು ಪಡೆಯುವ ಖುಷಿಯ ಕ್ಷಣಗಳನ್ನು ಅಪ್ಪನೂ ಪಡೆಯುವಂತೆ ಮಾಡುವುದು ಸಾಧ್ಯ. ಮಗುವಿಗೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸಲು ಅಪ್ಪನೂ ಕಲಿತರೆ ಸಹಜವಾಗಿಯೇ ಮಕ್ಕಳು ಅಪ್ಪನಿಗೆ ಹೆಚ್ಚು ಹೊಂದಿಕೊಳ್ಳುತ್ತಾರೆ. ಅಮ್ಮಂದಿರಿಗೂ ಕೊಂಚ ಬಿಡುವು ಸಿಗಬಹುದು.

ತೀರಾ ಎಳೆಯ ಹಸುಳೆಯನ್ನು ಎತ್ತಿಕೊಳ್ಳಲು ಅಪ್ಪ ಭಯಪಡುವುದುಂಟು. ಗಂಡಸರೆಂದರೆ ಒರಟಾಗಿರಬೇಕು ಎಂಬುದೇ ಮನಸ್ಸಿನಲ್ಲಿ ಗಟ್ಟಿಯಾಗಿ ಕುಳಿತಿರುವಾಗ, ಮೃದುವಾದ ಜೀವವೊಂದನ್ನು ಬೊಗಸೆಯಲ್ಲಿ ಹಿಡಿದುಕೊಳ್ಳುವುದು ಹೇಗಪ್ಪಾ ಎಂಬ ಚಿಂತೆಯೊಂದು ಅವರಲ್ಲಿ ಅಳುಕು ಮೂಡಿಸುತ್ತದೇನೋ. ಹಾಗಾಗಿ, ಮೆತ್ತನೆಯ ಪುಟ್ಟದಾದ ಗುಲಾಬಿ ಹಾಸಿಗೆಯ ಮೇಲಿರಿಸಿದ ಮಗುವನ್ನು ಒಂದರೆ ಕ್ಷಣ ಎತ್ತಿಕೊಂಡು ಬೇಗನೆ ಪತ್ನಿಯ ಮಡಿಲಿಗೆ ವರ್ಗಾಯಿಸಿಬಿಡುತ್ತಾರೆ. ಮಗು ಸ್ವಲ್ಪ ಬೆಳವಣಿಗೆಯಾಗುವವರೆಗೆ ಅಪ್ಪ ಹೀಗೆ ದೂರವಿರುವುದು ಸಾಮಾನ್ಯ. ಆದರೂ ಅಕ್ಕರೆಯಿಂದ ಕುತೂಹಲದಿಂದ ಮಗುವಿನ ಅಳುವಿಗೆ ದೂರದಿಂದಲೇ ಕಿವಿ ಆಗುತ್ತಾರೆ. ಹಾಗೆಂದು ಅಪ್ಪನ ಅಂತರಂಗದಲ್ಲಿ ತಾಯ್ತನವಿಲ್ಲ ಎನ್ನಲಾದೀತೇ. ಅಂತರಂಗದಲ್ಲಿ ಬಚ್ಚಿಟ್ಟುಕೊಂಡಿರುವ ಭಾವವನ್ನು ತುಸುವೇ ನೇವರಿಸಿದರೂ ಅವರು ಮಗುವಿನ ಸಾಮೀಪ್ಯದ ಖುಷಿಯನ್ನು ಅನುಭವಿಸುವುದು ಸಾಧ್ಯವಾದೀತೇನೋ. ಅದಕ್ಕಾಗಿ ಅಮ್ಮನು ನಿಧಾನವಾಗಿ ಒಂದೋ ಎರಡೋ ಕೆಲಸಗಳನ್ನು ಅಪ್ಪನಿಗೆ ವಹಿಸಿಕೊಟ್ಟು ನೋಡಬೇಕು. ಅಪ್ಪನು ಅಂತಹ ಕೆಲಸಗಳನ್ನು ತಬ್ಬಿಬ್ಬಾಗುತ್ತ, ಹೇಗೋ ನಿಭಾಯಿಸುವುದನ್ನು ನೋಡಬೇಕು. ಒಂದಿಷ್ಟು ಅಂತರದಿಂದ ಅಪ್ಪ ಮಗುವಿನ ಸಂಬಂಧದ ಚಂದ ನೋಡುವುದನ್ನು ಅಮ್ಮನೂ ಕಲಿಯಬೇಕು.

ಕೆಲವೊಮ್ಮೆ ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಅಪ್ಪಂದಿರಿಗೆ ಒಂದು ಪ್ರಶ್ನೆ ಎದುರಾಗುವುದುಂಟು. 'ಮಗುವಿನ ಡೈಪರ್ ಬದಲಿಸಲು ನಿಮಗೆ ತಿಳಿಯುತ್ತದೆಯೇ? ನಿಮ್ಮ ಮಗಳ ಜಡೆ ಹೆಣೆಯುವುದಕ್ಕೆ ಬರುತ್ತದೆಯೇ?' ಇಂಥ ಪ್ರಶ್ನೆಗಳಿಗೆ ಅಪ್ಪಂದಿರು ಏನೋ ಉತ್ತರಿಸುವಷ್ಟರಲ್ಲಿ ಸಭೆಯು ನಗೆಗಡಲಲ್ಲಿ ಮುಳುಗಿಬಿಡುತ್ತದೆ. ಅಪ್ಪನ ಅಂತರಂಗದಲ್ಲಿ ಮೃದುವಾದ ಅಲೆಯೊಂದು ಎದ್ದಿರುತ್ತದೆ – ಮಗಳಿಗೆ ಒಮ್ಮೆಯಾದರೂ ಜಡೆ ಹಾಕಬೇಕಿತ್ತು... ಎಂದು. ಅಂತರಂಗದಲ್ಲಿ ಕೇಳಿಸುವ ಇಂತಹ ಪಿಸುಮಾತುಗಳನ್ನೆಲ್ಲ ಅಪ್ಪಂದಿರು ನುಂಗಿಕೊಳ್ಳುತ್ತಾರೇನೊ?

ಅಪ್ಪನ ಪಾಲಿಗೆ ಅಮ್ಮನೇ ಟೀಚರ್ ಆಗಿ ಮಗುವನ್ನು ಹೇಗೆ ಸಂಭಾಳಿಸಬೇಕು ಎಂದು ಹೇಳಿಕೊಟ್ಟರೆ, ಇಂತಹ ಚಟುವಟಿಕೆಗಳು ಅಪ್ಪನ ಜವಾಬ್ದಾರಿಯಾಗಿ ಉಳಿಯದೇ ಅಕ್ಕರೆಯ ಒಂದು ಕ್ಷಣವಾಗಿ ಅವರೆದೆಯಲ್ಲಿ ಛಾಪೊತ್ತಬಹುದು. ಎಲ್ಲ ಅಪ್ಪಂದಿರೂ ಹೀಗೆ 'ಅಮ್ಮನ ಸ್ಕೂಲ್'ನಲ್ಲಿ ವಿದ್ಯಾರ್ಥಿಗಳೇ. ಎಲ್ಲರೂ ಒಳ್ಳೆಯ ವಿದ್ಯಾರ್ಥಿಗಳಾಗಲಿಕ್ಕಿಲ್ಲ. ಆದರೆ ಎಷ್ಟೋ ಮಂದಿ ಅಪ್ಪಂದಿರು ಮಕ್ಕಳ ಜೊತೆಗಿನ ಕ್ಷಣಗಳನ್ನು ಆಪ್ತವಾಗಿ ಅನುಭವಿಸಲು ಇಷ್ಟಪಡುತ್ತಾರೆ ಎಂಬುದು ಸುಳ್ಳಲ್ಲ. ಹಾಗೆ ನೋಡಿದರೆ 'ಜನನಿ ತಾನೆ ಮೊದಲ ಗುರು' ಎಂಬುದು ಮಕ್ಕಳಿಗಷ್ಟೇ ಅನ್ವಯ ಆಗುವುದಿಲ್ಲ. ಅಪ್ಪನ ಪಟ್ಟವನ್ನೊದಗಿಸುವ ಪತಿಗೂ ಆಕೆಯೇ ಗುರುವಾಗುವುದುಂಟು.

ಪ್ರತಿಕ್ರಿಯಿಸಿ: feedback@sudha.co.in